**ಪಿ. ಟಿ. ಉಷಾ ಮಾಡಬೇಕಾದ್ದೇನು?**

ಸೆಪ್ಟೆಂಬರ್ ೨೭, ೧೯೯೨ರ ಸಂಚಿಕೆಯಲ್ಲಿ ಪ್ರಕಟವಾದ 'ಪಿ.ಟಿ. ಉಷಾ–ಮತ್ತೆ ಟ್ರ್ಯಾಕ್ ಗೆ ಇಳಿದ ಚಿನ್ನದ ಚಿಗರೆ' ಲೇಖನ ಓದಿ ಆಶ್ಚರ್ಯವಾಯಿತು. ಚಿನ್ನದ ರಾಣಿ ಪಿ,ಟಿ,ಉಷಾರ ಪುನರಾಗಮನ ಅವರ ಅಭಿಮಾನಿಗಳೆಲ್ಲರಿಗೂ ಆನಂದ ತಂದಿದ್ದರೂ ಈ ನಿರ್ಧಾರ ತೀರ ಅಸಮಂಜಸವೆನಿಸುತ್ತದೆ. ಪಿ.ಟಿ.ಉಷಾ, ಭಾರತ ಕಂಡಿರುವ ಅತ್ಯಂತ ಪ್ರತಿಭಾವಂತ ಹಾಗೂ ಯಶಸ್ವಿ ಅಥ್ಲೀಟ್ ಎಂಬುದು ನಿರ್ವಿವಾದ. ಆದರೆ ಪಿ.ಟಿ. ಉಷಾರು ಮದುವೆಯಾಗಿ, ಒಂದು ಮಗುವಿನ ತಾಯಿಯಾದ ಅನಂತರವೂ ಮತ್ತೆ ಓಡುವ ನಿರ್ಧಾರವನ್ನು ಕೈಗೊಂಡಿರುವುದು ಅವರಿಗಾಗಲಿ ಅಥವಾ ನಮ್ಮ ದೇಶಕ್ಕಾಗಲಿ ಶ್ರೇಯಸ್ಕರವಲ್ಲ. ಎರಡು ವರ್ಷಗಳ ಹಿಂದೆ ಅವರು ನಿವೃತ್ತಿಯ ಘೋಷಣೆ ಮಾಡಿದಾಗ, ಈ ನಿರ್ಧಾರಕ್ಕೆ ಮದುವೆಯೊಂದೇ ಕಾರಣವಾಗಿರಲಿಲ್ಲ. ಆದರೆ ಅವರ ಸಾಧನೆಯ ಮಟ್ಟ ಕುಗ್ಗಿದ್ದುದೂ ಒಂದು ಮುಖ್ಯ ಕಾರಣವಾಗಿತ್ತು.

ಸೋವಿಯತ್ ಒಕ್ಕೂಟವನ್ನು ಒಳಗೊಂಡಂತೆ ಅನೇಕ ಕಮ್ಯುನಿಸ್ಟ್ ರಾಷ್ಟ್ರಗಳು ಬಹಿಷ್ಕರಿಸಿದ್ದ ಲಾಸ್ ಏಂಜಲೀಸ್ ಒಲಿಂಪಿಕ್ಸ್ ನಲ್ಲಿ ಪಿ.ಟಿ. ಉಷಾ ಅತ್ಯಮೋಘ ಪ್ರದರ್ಶನವನ್ನು ನೀಡಿದ್ದೇನೋ ನಿಜ. ಆದರೆ ನಾಲ್ಕು ವರ್ಷಗಳ ಅನಂತರ ೧೯೮೮ರಲ್ಲಿ ನಡೆದ ಸೋಲ್ ಒಲಿಂಪಿಕ್ಸ್ ನಲ್ಲಿ ಲಾಸ್ ಏಂಜಲೀಸ್ ನಲ್ಲಿ ಅವರು ಓಡಿದ್ದ ಸಮಯವನ್ನೂ ಮತ್ತೆ ಮುಟ್ಟಲಾಗಲಿಲ್ಲ. ಸೋಲ್ ನಲ್ಲಿ ಅವರು ತಮ್ಮ ವಯಸ್ಸಿನಿಂದಾಗಿ (ಆಗ ಅವರಿಗೆ ೨೪) ಉತ್ತಮ ಪ್ರದರ್ಶನ ನೀಡಲಾಗಲಿಲ್ಲ. ಹೀಗಿರುವಾಗ ಒಂದು ಮಗುವಿನ ತಾಯಿಯಾಗಿ, ಸಂಸಾರದ ಸಂಕಷ್ಟಗಳಿಗೆ ಸಿಲುಕಿ, ವಯಸ್ಸು ಹೆಚ್ಚಾದ ಮೇಲೆ, ಈಗ ಮತ್ತೆ ಕ್ರೀಡೆಗೆ ಧುಮುಕಿ ಉತ್ತಮ ಸಾಧನೆಯನ್ನು ಮಾಡುವುದು ತುಂಬಾ ಕಷ್ಟವಾಗುತ್ತದೆ. ಮೊದಲಿನಂತೆ ಈಗ ಅವರನ್ನು ಸರಿಯಾದ ದಾರಿಯಲ್ಲಿ ನಡೆಸಲು ನಂಬಿಯಾರ್ ರಂತಹ ಮೇಧಾವಿ ತರಬೇತಿದಾರರು ಇಲ್ಲ. ಇನ್ನೊಂದು ಅಂಶವೆಂದರೆ, ಬಾರ್ಸಿಲೋನಾ ಒಲಿಂಪಿಕ್ಸ್ ನಲ್ಲಿ ಭಾರತೀಯರ ಕೆಟ್ಟ ಪ್ರದರ್ಶನವನ್ನು ನೋಡಿ ಹತಾಶಗೊಂಡಿರುವ ನಾವು, ಮುಂದಿನ ಒಲಿಂಪಿಕ್ಸ್ ನಲ್ಲಿ ಪಿ.ಟಿ. ಉಷಾರು ಸೋಲು ಅನುಭವಿಸಿದರೆ ಅದು ಇನ್ನಷ್ಟು ಅವಮಾನಕ್ಕೆ ಎಡೆ ಮಾಡಿಕೊಡುತ್ತದೆ. ಆದ್ದರಿಂದ ಉಷಾರವರು ತಮ್ಮ ಈ ನಿರ್ಧಾರವನ್ನು ಬದಲಿಸಿ, ತಮ್ಮ ಕ್ರೀಡಾಸಾಮರ್ಥ್ಯವನ್ನು ಅನುಭವವನ್ನು ಯುವ ಕ್ರೀಡಾಪಟುಗಳಿಗೆ ತರಬೇತಿ ನೀಡುವ ಮೂಲಕ ಸಾರ್ಥಕಪಡಿಸಿಕೊಳ್ಳಲಿ.

Oct 25th 1992 Taranga P.T.Usha Madabekaddenu ?